# ಜೆ ಎಸ್ ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತತೆ ಪಡೆದಿದೆ)

ಊಟಿ ರಸ್ತೆ, ಮೈಸೂರು - ೫೭೦ ೦೨೫

(ಮೈಸೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜು :: ನ್ಯಾಕ್‌ನ ಚತುರ್ತಾರ ಸ್ಥಾನ ಹೊಂದಿದೆ)

☎ : 0821-2482930 & 2488613, FAX : 0821 - 2480390 E-mail : jsscm25@sify.com


ಸಂಖ್ಯೆ : ಪತ್ರಿಕಾ ಪ್ರ...
ಸಂಖ್ಯೆ: ಜೆಎಸ್‌ಎಸ್‌ಸಿಎಂ/ ದಿನಾಂಕ: 28.03.2013

## ಪ್ರಕಟಣೆಯ ಕೃಪೆಗಾಗಿ

### ಭಾರತ್ ಸ್ಕೌಟ್ಸ್ ಮತ್ತು ಯೂತ್ ರೆಡ್‌ಕ್ರಾಸ್ ಘಟಕಗಳ ಉದ್ಘಾಟನೆ

ದಿನಾಂಕ : 27-3-2013ರಂದು ಮೈಸೂರಿನ ಊಟಿರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಭಾರತ್ ಸ್ಕೌಟ್ಸ್ ರೋವರ್ಸ್ ಮತ್ತು ಯೂತ್ ರೆಡ್‌ಕ್ರಾಸ್ ಘಟಕಗಳ ಉದ್ಘಾಟನೆ ಕಾರ್ಯಕ್ರಮ ಜರುಗಿತು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ರೋವರ್ಸ್ ಘಟಕವನ್ನು ಉದ್ಘಾಟಿಸಿ ಮಾತನಾಡುತ್ತಾ ಈಗಿನ ಯುವಕರಲ್ಲಿ ಸಾಮಾಜಿಕ ಪ್ರಜ್ಞೆ, ಸಹಾಯ ಮತ್ತು ಸಹಕಾರ ಮನೋಭಾವಗಳು ಕಡಿಮೆಯಾಗುತ್ತಿದ್ದು ಇವುಗಳನ್ನು ಬೆಳೆಸುವುದು ರೋವರ್ಸ್ ಮತ್ತು ರೆಡ್‌ಕ್ರಾಸ್‌ನಂತಹ ಸೇವಾ ಸಂಸ್ಥೆಗಳ ಮುಖ್ಯ ಉದ್ದೇಶಗಳಾಗಿದ್ದು, ಈ ಒಂದು ಘಟಕವನ್ನು ಜೆಎಸ್‌ಎಸ್ ಕಾಲೇಜಿನಲ್ಲಿ ಪ್ರಾರಂಭಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಅಭಿಪ್ರಾಯಪಟ್ಟರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರೊ. ಎಂ. ರುದ್ರಯ್ಯ, ನೋಡಲ್ ಆಫಿಸರ್, ಯೂತ್ ರೆಡ್‌ಕ್ರಾಸ್ ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ಯೂತ್ ರೆಡ್‌ಕ್ರಾಸ್ ಘಟಕವನ್ನು ಉದ್ಘಾಟಿಸಿ ಯುವಜನರಲ್ಲಿ ಧೈರ್ಯ, ಸಾಹಸ ಹಾಗೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವಂತಹ ಗುಣಗಳನ್ನು ಬೆಳೆಸಲು ರೆಡ್‌ಕ್ರಾಸ್‌ನಂತಹ ಸಂಸ್ಥೆಗಳು ನೆರವಾಗುತ್ತವೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಮೈಸೂರು ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದ ಕಾರ್ಯದರ್ಶಿಗಳಾದ ಡಾ|| ಗುರುಮೂರ್ತಿಯವರು 'ನೇರವಾಗಿ ನುಡಿಯುವುದನ್ನು' ವಿದ್ಯಾರ್ಥಿಗಳು ಕಲಿತು ಪ್ರಸ್ತುತ ವಿದ್ಯಾಮಾನಗಳಿಗೆ ಸ್ಪಂದಿಸುವುದು ಅವಶ್ಯಕವಾಗಿದೆ. ಮನುಷ್ಯನಿಗೆ ಆರೋಗ್ಯ ಅತಿ ಮುಖ್ಯವಾದುದು, ಆರೋಗ್ಯವನ್ನು ಕಾಪಾಡಿಕೊಳ್ಳಲು ದೈಹಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಲ್ಗೊಳ್ಳಬೇಕೆಂದು ತಿಳಿಸಿದರು. ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಚಾರ್ಯರು, ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು, ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಶೈಕ್ಷಣಿಕ ಡೀನ್ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್‌ರವರು ಉಪಸ್ಥಿತರಿದ್ದರು.

ಕು. ವಿದ್ಯಾಶ್ರೀಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಮಾರಂಭದಲ್ಲಿ ಶ್ರೀ ಎಂ.ಎಸ್. ವೆಂಕಟರಾವ್ ಸ್ವಾಗತಿಸಿದರು, ಶ್ರೀ ಟಿ.ಎಂ. ಮರಿಸ್ವಾಮಿಯವರು ವಂದಿಸಿದರು, ಪ್ರೊ. ಹೆಚ್.ಎಸ್. ನಾಗೇಂದ್ರಕುಮಾರ್‌ರವರು ನಿರೂಪಿಸಿದರು.

(ಪ್ರೊ. ಬಿ.ವಿ. ಸಾಂಬಶಿವಯ್ಯ)
ಪ್ರಾಂಶುಪಾಲರು

ಗೆ

ಸಂಪಾದಕರು / ವರದಿಗಾರರು

- - - - - - - - - - - - - -

- - - - - - - - - - - - - -